**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ: 242 /2023**

**ಸಾಕ್ಷಿಯನ್ನು ದಿಃ 20.08.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ.ಪಿ.ಕೆ.ಆರ್ ವಕೀಲರಿಂದಃ**

ರೂ. 3,25,000/- ಹಣ ಆರೋಪಿಗೆ ಕೊಟ್ಟಿದ್ದಿರಾ ಎಂದು ತೋರಿಸಲು ನಿಮ್ಮ ಬಳಿ ದಾಖಲೆ ಇದೆಯೇ ಎಂದರೆ ದಾಖಲೆ ಇಲ್ಲ ಅವರು ಚೆಕ್ ಕೊಟ್ಟಿದ್ದಾರೆ. ರೂ.500ರ ಮುಖಬೆಲೆಯ ಒಟ್ಟು 650 ನೋಟುಗಳನ್ನು ಕೊಟ್ಟಿದ್ದೇನೆ. Friendly interest ಎಂದರೆ ಏನೆಂದು ಗೊತ್ತಿಲ್ಲ. Friendly interest ಎಂದು ನನ್ನ ವಕೀಲರಿಗೆ ನಾನು ಹೇಳಿಲ್ಲ. ಚೆಕ್ ಸಂಖ್ಯೆ ಗೊತ್ತಿಲ್ಲ. ಆರೋಪಿ ನಮ್ಮ ಮನೆಯಲ್ಲಿ ಕೂಲಿ ಮಾಡಿಕೊಂಡಿದ್ದು, ಯಾವುದೇ ಸಂದರ್ಭದಲ್ಲಿ ನಾನು ಆರೋಪಿಗೆ ರೂ.3,25,000/- ಸಾಲ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ವಿರುದ್ದ ಈ ಪ್ರಕರಣವನ್ನು ದಾಖಲಿಸುವ ಪೂರ್ವದಲ್ಲಿ ಆರೋಪಿ ನನ್ನ ವಿರುದ್ದ ಪೋಲಿಸ್ ಠಾಣೆಯಲ್ಲಿ ದೂರು ಕೊಟ್ಟಾಗ ನಾನು ಚೆಕ್ಕನ್ನು ಹಿಂತಿರುಗಿಸುತ್ತೇನೆ ಎಂದು ಒಪ್ಪಿಕೊಂಡಿದ್ದರೂ ಸಹ ಅದನ್ನು ಹಿಂದಿರುಗಿಸಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ರೂ.3,25,000/- ಸಾಲ ಕೊಡದೇ ಇದ್ದರೂ ಸಹ ಅನ್ಯತಾ ಫಾಯಿದೆ ಪಡೆಯಲು ಸುಳ್ಳು ಕೇಸನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. 2022 ರಲ್ಲಿ ನಾನು ಚೆಕ್ಕನ್ನು ಬ್ಯಾಂಕ್ ಗೆ ಹಾಜರುಪಡಿಸಿದೆ. ಆರೋಪಿಯ ಖಾತೆ ಮುಕ್ತಾಯವಾಗಿದೆ ಎಂಬ ಕಾರಣವನ್ನು ಬ್ಯಾಂಕ್ ನವರು ಕೊಟ್ಟರು. ಆರೋಪಿಯ ಖಾತೆ ಮುಕ್ತಾಯವಾಗಿದೆ ಎಂಬ ಬಗ್ಗೆ ನಾನು ದೂರು ಕೊಟ್ಟಿಲ್ಲ. ಆರೋಪಿಯಿಂದ ಹಣ ವಸೂಲಿ ಮಾಡುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.